


ಪಿಂಕಿ: ಲೇ, ನೋಡೇ ಅವ್ನ ದಿನಾನೂ ಮಿಣ ಮಿಣ ಡ್ರೆಸ್ ಹಾಕ್ಕೊಂಡು ಬರ್ತಾನೆ. ನಂಗೆ ತುಂಬಾ ಇಷ್ಟ ಕಣೇ ಅವನು.

ಡಿಂಕಿ: ಬೆಂಕಿ ಬಿತ್ತು ನಿನ್ನ ಟೇಸ್ಟ್‌ಗೆ. ಅವರಪ್ಪ ದೋಬಿ ಕಣೇ ಅದ್ಕೆ ದಿನಾ ಹೊಸ ಹೊಸಾ ಡ್ರೆಸ್ಸು.

ಪ್ರವಚನಕಾರ 'ಮಾತು ಮುತ್ತಿನಂತಿರಬೇಕು; ಸ್ಫಟಿಕದ ಶಲಾಕೆಯಂತಿರಬೇಕು; ಎಲ್ಲರೊಂದಿಗೂ ಹೇಗೆ ಮಾತನಾಡಬೇಕು ಎಂಬುದನ್ನು ನಾನು ಈ ದಿನ ಹೇಳ್ತೀನಿ' ಎಂದು ಪ್ರವಚನ ಆರಂಭಿಸಿದರು. ತಿಮ್ಮ ತಕ್ಷಣ ಮೇಲಕ್ಕೆದ್ದ.

'ಸ್ವಾಮೀ ಹೆಂಡತಿ ಜೊತೆಗೆ ಹೇಗೆ ಮಾತನಾಡಬೇಕು?' ಸಮಸ್ಯೆ ಮುಂದಿಟ್ಟ.

'ತಣ್ಣಗೆ ಕುಳಿತುಕೋ ಅದರ ಸಂಶೋಧನೆ ಇನ್ನೂ ನಡೆದಿದೆ' ಗುಡುಗಿದರು ಪ್ರವಚನಕಾರರು.

***

ತಿಮ್ಮ ರಕ್ತದಾನ ಮಾಡಲು ಹಾಸ್ಪಿಟಲ್‌ಗೆ ಬಂದ.

ಡಾಕ್ಟರ್ : ಸಕ್ರೆ ಇದೆಯಾ?

ತಿಮ್ಮ: ಇದೆ ಡಾಕ್ಟ್ರೆ, ಮನೆಗೆ ಹೋಗಿ ತರ್ಲಾ?

***

ತಿಮ್ಮ: ಲೇ ತಿಮ್ಮಿ, ಏನು ನೋಡಿ ನನ್ನ ಮದ್ವೆಯಾದೆ?

ತಿಮ್ಮಿ : ನಿಮ್ಮ ತಂಗಿ ಮಾತು ಕೇಳಿ.

ತಿಮ್ಮ: ಏನು ಹೇಳಿದ್ಲು?

ತಿಮ್ಮಿ : ನೀವು ತುಂಬಾ ಚೆನ್ನಾಗಿ ಅಡ್ಗೆ ಮಾಡ್ತೀರಿ. ಬಟ್ಟೆ ತೊಳಿತೀರಿ ಅಂತ ಹೇಳಿದ್ಲು.

***

ತಿಮ್ಮ: ನನ್ನ ಲವರ್ ಶೀಲಾ ಮತ್ತು ನನ್ನ ಮದುವೆ ಹಿರಿಯರಿಂದ್ಲೇ ಫಿಕ್ಸ್ ಆಯ್ತು ಕಣೋ.

ಗುಂಡ: ಹೌದಾ, ಗುಡ್ ಮದುವೆ ಯಾವಾಗ?

ತಿಮ್ಮ: ನಂದು ಫೆಬ್ರುವರಿ ಹತ್ತಕ್ಕೆ, ಶೀಲಾನದು ಫೆಬ್ರುವರಿ ಹದಿನಾಲ್ಕಕ್ಕೆ.

***

ಡಾಕ್ಟರ್ ಬಳಿ ತನ್ನ ಮಗಳನ್ನು ಕರೆ ತಂದ ನಿಂಗಿ 'ನೋಡಿ ಡಾಕ್ಟ್ರೆ, ಇವಳು ತುಂಬಾ ತೊದಲಿಸ್ತಾಳೆ ಒಂದಿಷ್ಟು ಪರೀಕ್ಷೆ ಮಾಡಿ' ಅಂದಳು.

'ದಿನವಿಡಿ ತೊದಲಿಸ್ತಾಳಾ?' ಡಾಕ್ಟರ್ ಪರೀಕ್ಷಿಸುತ್ತ ಕೇಳಿದರು.

'ಹಾಗೇನಿಲ್ಲ ಡಾಕ್ಟರ್, ಅವಳು ಮಾತಾಡ್ಲಿಕ್ಕೆ ಪ್ರಯತ್ನಿಸಿದಾಗೆಲ್ಲ ತೊದಲಿಸ್ತಾಳೆ' ಉತ್ತರಿಸಿದಳು ನಿಂಗಿ.

***

'ಏನ್ರೀ, ನಾನು ಕಳಿಸಿದ ಬಿಲ್ಲನ್ನು ತೆರೆದು ನೋಡದೇ ಮರಳಿ ಕಳಿಸಿದ್ದೀರಲ್ಲ ಯಾಕೆಂದು ಕೇಳಬಹುದಾ?' ಡಾಕ್ಟರ್ ಫೋನಾಯಿಸಿ ತಿಮ್ಮನನ್ನು ಕೇಳಿದರು.

'ಮತ್ತೆ ನೀವೇ ಹೇಳಿದ್ದೀರಲ್ಲ ಡಾಕ್ಟರ್, ಮನಸ್ಸಿಗೆ ದುಗುಡ, ಒತ್ತಡವಾಗುವುದನ್ನು ಆದಷ್ಟು ಕಡಿಮೆ ಮಾಡಿ ಅಂತ' ರೋಗಿ ಉತ್ತರಿಸಿದ.

***

ರೆಸ್ಟೋರೆಂಟ್‌ನೊಳಗೆ ಅಸ್ಥಿಪಂಜರವೊಂದು ನಡೆದು ವೇಟರ್ ಬಳಿ ಬಂತು.

ವೇಟರ್ ಆಶ್ಚರ್ಯದಿಂದ 'ಏನ್ಮಾಡೋದು? ನೀವು ತುಂಬ ಹೊತ್ತಿನಿಂದ ಕಾಯುತ್ತಿದ್ದಿರಿ ಅನಿಸುತ್ತದೆ. ಆದ್ರೇನು ಮಾಡೋದು ಗಿರಾಕಿಗಳು ತುಂಬ ಇದ್ದರಲ್ಲ. ರೆಸ್ಟೋರೆಂಟ್ ಈ ದಿನ ತುಂಬ ರಶ್ ಆಗಿದೆ. ಇನ್ನೊಂದು ಐದು ನಿಮಿಷ ಒಬ್ಬೊಬ್ಬರೇ ಏಳುತ್ತಾರೆ ಇರಿ' ಎಂದ.

***

ಅಷ್ಟೊಂದು ನಿರರ್ಗಳವಾಗಿ ವೇದಿಕೆ ಮೇಲೆ ಮಾತನಾಡುತ್ತಿದ್ದ ಸಾಹಿತಿಯೊಬ್ಬರು ಇತ್ತೀಚೆಗೆ ಮೌನಿಯಾದರು.

ಅವರ ಸಂದರ್ಶನ ನಡೆದಾಗ ಸಂದರ್ಶಕ ಈ ಕುರಿತು ಪ್ರಶ್ನಿಸಿದ.

'ಸರ್, ಈ ಮೌನಕ್ಕೆ ಕಾರಣವೇನು?'

'ಎಲ್ಲವೂ ನನ್ನ ಹೆಂಡತಿಯ ಲೀಲೆ!' ಸಾಹಿತಿ ಉತ್ತರಿಸಿದರು.

***

ನೆರೆಹಾವಳಿಯಲ್ಲಿ ಸಿಲುಕಿಕೊಂಡಿದ್ದವರನ್ನು ಹೆಲಿಕಾಪ್ಟರಿನಲ್ಲಿ ಪಾರು ಮಾಡುತ್ತಿದ್ದರು.

ನಾಲ್ಕು ಮಂದಿ ಹಗ್ಗಕ್ಕೆ ಜೋತು ಬಿದ್ದಿದ್ದರು.

ಕಾಪ್ಟರಿನಿಂದ ಕೂಗಿ ಹೇಳಿದರು 'ನೋಡಿ ತೂಕ ಹೆಚ್ಚಾಗಿದೆ. ಅನಾಹುತವಾಗಬಹುದು. ಕಾರಣ ನಿಮ್ಮಲ್ಲಿ ಯಾರಾದರೊಬ್ಬರು ಮಾತ್ರ ಬದುಕಲು ಸಾಧ್ಯ ಉಳಿದವರು ಹಗ್ಗ ಕೈಬಿಡಲೇಬೇಕು.'

ಎಂಜಿನಿಯರ್, ವೈದ್ಯ, ಉಪನ್ಯಾಸಕ ಮತ್ತು ರಾಜಕಾರಣಿ ಒಬ್ಬ ಹಗ್ಗಕ್ಕೆ ಜೋತು ಬಿದ್ದಿದ್ದರು. ಯಾರು ಉಳಿಯುವುದೆಂದು ಯೋಚನೆಯಲ್ಲಿದ್ದರು. ಅಷ್ಟರಲ್ಲಿ ರಾಜಕಾರಣಿ 'ನೋಡ್ರಪಾ, ನಾನು ಸಮಾಜ ಸೇವಕ, ನಾನು ತ್ಯಾಗ ಮಾಡಲೇಬೇಕು. ಕಾರಣ ನಾನೀಗ ಹಗ್ಗ ಬಿಡುತ್ತೇನೆ. ಈಗ ನೀವೆಲ್ಲ ಚಪ್ಪಾಳೆ ತಟ್ಟಿ ಬಿಡಿ' ಎಂದರು.

ಎಲ್ಲರೂ ಖುಷಿಯಿಂದ ಚಪ್ಪಾಳೆ ತಟ್ಟಿದರು. ಹಗ್ಗದಲ್ಲಿ ರಾಜಕಾರಣಿಯೊಬ್ಬರೇ ಉಳಿದರು.

(ಸಂಗ್ರಹ)

ಪ್ರಕಾಶ ಎಸ್.ಮನ್ನಂಗಿ,ಮೋಟೆಬೆನ್ನೂರು.

